**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ.ಆರ್.ನಗರ.**

**ಸಿ.ಸಿ. ನಂಃ 330/2024**

ಪಿರ್ಯಾದಿದಾರರು: ಕರ್ನಾಟಕ ಸರ್ಕಾರ ಪರವಾಗಿ ಸಾಲಿಗ್ರಾಮ
ಪೋಲಿಸ್ ಠಾಣೆ.

ಃ ವಿರುದ್ಧ ಃ

ಆರೋಪಿತರು: 1. ರವಿಕುಮಾರ್ ಜಿ.ಎಲ್. ಬಿನ್ ಲೇಟ್ ಲಕ್ಷ್ಮಣಚಾರಿ,
ವಃ 50 ವರ್ಷ,
ವಾಸಃ ಗಂಧನಹಳ್ಳಿ ಗ್ರಾಮ,
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

2. ಮೂರ್ತಿ ಬಿನ್ ಲೇಟ್ ಶಿವಪ್ಪ,
42 ವರ್ಷ,
ವಾಸಃ ಹಿಟ್ಟನಹಳ್ಳಿ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

**ಆಪಾದನೆ**

ದಿನಾಂಕಃ 11.02.2024 ರಂದು ಬೆಳಗ್ಗೆ 11.50 ಗಂಟೆ ಸಮಯದಲ್ಲಿ ಸಾಲಿಗ್ರಾಮ ಠಾಣಾ ಸರಹದ್ದಿಗೆ ಸೇರಿದ ಕರ್ತಾಳುಗೇಟ್–ಕೇರಳಾಪುರ ರಸ್ತೆ ನಡುವೆ ಮಹೇಶ್‌ರವರ ಮನೆಯ ಮುಂಭಾಗದ ರಸ್ತೆಯಲ್ಲಿ 1 ನೇ ಆರೋಪಿಯಾದ ನೀವು ಕೆಎ–13–ಕೆ–3832 ರ ನಂಬರಿನ ಮೋಟಾರ್ ಸೈಕಲ್ ಅನ್ನು ಕೇರಳಾಪುರ ರಸ್ತೆ ಕಡೆಯಿಂದ ಕರ್ತಾಳು ಗೇಟ್ ಕಡೆಗೆ ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿದ್ದು, ಆ ಮೂಲಕ 1 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಎರಡನೆಯದಾಗಿ, ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ 1 ನೇ

ಆರೋಪಿಯಾದ ನೀವು ಮೇಲ್ಕಂಡ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮಹೇಶರವರ ಮನೆಯ ಮುಂದಿನ ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದ ಜವರೇಗೌಡ ರವರಿಗೆ ಹಿಂದಿನಿಂದ ಡಿಕ್ಕಿ ಮಾಡಿದ ಪರಿಣಾಮ ಜವರೇಗೌಡ ರವರು ಕೆಳಗೆ ಬಿದ್ದು ತಲೆಗೆ ತೀವ್ರ ಸ್ವರೂಪದ ಗಾಯವಾಗಿ, ಬಲಕಾಲಿಗೆ ಮತ್ತು ಮೈಕೈಗೆ ಗಾಯಗಳಾಗಿ ಮೃತಪಟ್ಟಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 304(ಎ) ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಕೊನೆಯದಾಗಿ, ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿಯಾದ ನೀವು ಕೆಎ-13-ಕೆ-3832 ರ ಮೋಟಾರ್ ಸೈಕಲ್‌ನ ಮಾಲೀಕರಾಗಿದ್ದು, ವಿಮೆಯಿಲ್ಲದ ವಾಹನವನ್ನು 1 ನೇ ಆರೋಪಿಗೆ ಚಾಲನೆ ಮಾಡಲು ನೀಡಿದ್ದು, ಆ ಮೂಲಕ ಆರೋಪಿಯಾದ ನೀವು ಕಲಂ 146 ರೆ/ವಿ 196 ಐ.ಎಂ.ಪಿ ಕಾಯ್ದೆ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕಃ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
ಪ್ರ.ದ.ನ್ಯಾದಂ.ಗಳು, ಕೆ.ಆರ್.ನಗರ.